# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ–9087/2017/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 17/10/2018

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

ವಿಷಯ: ಧುಪದಾಳ ಗ್ರಾಮದ ರಿ.ಸರ್ವೆ ನಂ. 120 (82ಎ 12 ಗುಂಟೆ) ಮತ್ತು ರಿ.ಸರ್ವೆ ನಂ. 121(4ಎ 22 ಗುಂಟೆ) ಜಮೀನನ್ನು ರಕ್ಷಿಸಲು ಜಮೀನಿನ ಸುತ್ತ ತಂತಿ ಬೇಲಿ ನಿರ್ಮಿಸುವ ಕಾರ್ಯವನ್ನು ಕ.ನೀ.ನಿ.ನಿ. ಜಿ.ಎಲ್.ಬಿ.ಸಿ., ವಿಭಾಗ ನಂ. 1, ಘಟಪ್ರಭಾ ಇಲಾಖಾ ವತಿಯಿಂದ ಕೈಗೊಂಡಿದ್ದು ಉಳಿದ ಜಮೀನಿನ ಸುತ್ತ ತಂತಿ ಬೇಲಿ ಹಾಕಲು 2018–19ನೇ ಸಾಲಿನಲ್ಲಿ ಕಾರ್ಯಕ್ರಮ ನಿಯೋಜಿಸಿದ್ದು ನಿಯಮಾನುಸಾರ ಒತ್ತುವರಿದಾರರನ್ನು ಪೂರ್ಣವಾಗಿ ತೆರವುಗೊಳಿಸಿ ತಂತಿ ಬೇಲಿ ಹಾಕಿ ಸರ್ಕಾರಿ ಭೂಮಿಯನ್ನು ಸಂರಕ್ಷಿಸಲು ಅಗತ್ಯ ಕ್ರಮ ಜರುಗಿಸುವುದರ ನಡವಳಿಕೆ ಕುರಿತು ವರದಿ.

*****

ಶ್ರೀ ವಸಂತ ರಾಮಪ್ಪ ಕಡಹಂತಿ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ರವರು ಈ ದೂರನ್ನು, ಶ್ರೀ ಸಾಗರೆ, ಕಾರ್ಯಪಾಲಕ ಅಭಿಯಂತರರು, ಕೆ.ಐ.ಡಿ. ಜಿ.ಎಲ್.ಬಿ.ಸಿ., ಉಪ ವಿಭಾಗ, ಘಟಪ್ರಭ, ಗೋಕಾಕ ತಾಲ್ಲೂಕು, ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ರವರುಗಳ ವಿರುದ್ಧ ತನಿಖೆ ನಡೆಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ದೂರಿನ ಸಂಕ್ಷಿಪ್ತ ವಿವರ: ಧುಪದಾಳ್ ಗ್ರಾಮದಲ್ಲಿ ಕರ್ನಾಟಕ ನೀರಾವರಿ ಇಲಾಖೆಯ ಭೂಮಿ–ಜಾಗಗಳಲ್ಲಿ ಭಾರಿ ಭ್ರಷ್ಟಾಚಾರ ನಡೆದಿದ್ದರು ಮೇಲಾಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಎ.ಸ.ನಂ. 120 ಮತ್ತು 121 ಜಾಗಗಳಲ್ಲಿ ಗಣಿಗಾರಿಕೆ ನಡೆಯುತ್ತಿದ್ದು ಕ್ರಶರ್‌ಗಳನ್ನು ಹಾಕಿದ್ದು ಕಾನೂನು ಬಾಹಿರ ಮನೆಗಳನ್ನು ನಿರ್ಮಿಸಿದ್ದು ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸರ್ಕಾರಕ್ಕೆ ಕೋಟಿಗಟ್ಟಲೆ ಹಾನಿಯಾಗುತ್ತಾ ಇದೆ. ಈ ಬಗ್ಗೆ ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೇಳಲಾಗಿ ದುಷ್ಟ ಜನರು

ಫಿರ್ಯಾದುದಾರರ ಮೇಲೆ 21/04/2017 ರಂದು ಹಲ್ಲೆ ಮಾಡಿ ಕೊಲೆ ಬೆದರಿಕೆ ಹಾಕಿದ್ದು, ಪೊಲೀಸ್‌ಗೆ ದೂರು ನೀಡಿರುತ್ತೇನೆ. ನೀರಾವರಿ ಇಲಾಖೆಯ ಅಧಿಕಾರಿಗಳಿಗೆ ಈ ಎಲ್ಲಾ ವಿಷಯ ಗೊತ್ತಿದ್ದರೂ ಯಾವುದೇ ಕ್ರಮ ಜರುಗಿಸಿರುವುದಿಲ್ಲ. ಸರ್ವೆ ನಂ. 120ರಲ್ಲಿ 81 ಎಕರೆ 4 ಗುಂಟೆ ಮತ್ತು ಸರ್ವೆ ನಂ. 121ರಲ್ಲಿ 4 ಎಕರೆ 22 ಗುಂಟೆ ಮತ್ತು 30 ಗುಂಟೆ ಅಕ್ವಾಯರ್ ಮಾಡಲಾಗಿದೆ ಎಂದು ಆರೋಪಿಸಿರುತ್ತಾರೆ.

ದೂರಿನೊಂದಿಗೆ ಮಾಹಿತಿ ಹಕ್ಕು ಕಾಯ್ದೆ ರೀತ್ಯಾ ಪಡೆದ ದಾಖಲೆಗಳ ಪ್ರತಿಗಳು, ಅಕ್ರಮ ಸಕ್ರಮಕ್ಕೆ ಸಂಬಂಧಪಟ್ಟ ದಾಖಲೆ ಪ್ರತಿಗಳು, ಆರ್.ಟಿ.ಸಿ. ನಕಲು ಪ್ರತಿಗಳು, ಕರ ಆಕರಣೆ ಉತಾರಗಳ ಪ್ರತಿಗಳು, ಅನಧಿಕೃತ ನಿರ್ಮಾಣದ ಕ್ರಮ ಬದ್ಧಗೊಳಿಸುವಿಕೆ ಬಗ್ಗೆ ಕೋರಿ ಸಲ್ಲಿಸಿದ ಅರ್ಜಿ ಪ್ರತಿಗಳನ್ನು ಲಗತ್ತಿಸಿರುತ್ತಾರೆ.

3. ಎದುರುದಾರರ ಆಕ್ಷೇಪಣೆ:-

ಘಟಪ್ರಭಾ ಎಡದಂಡೆ ಕಾಲುವೆ ಹಾಗು ಧುಪದಾಳದಲ್ಲಿ ನೀರಾವರಿ ವಸಹಾತು ಹಾಗೂ ಕಛೇರಿಗಳ ನಿರ್ಮಾಣಕ್ಕಾಗಿ 1949ರಿಂದ 1955ರವರೆಗಿನ ಸಾಲಿನ ಅವಧಿಯಲ್ಲಿ ದೂಪದಾಳ ಗ್ರಾಮದ ರಿ.ಸ.ನಂ.120 (ಕ್ಷೇತ್ರ 82 ಎಕರೆ 12 ಗುಂಟೆ) ಮತ್ತು ರಿ.ಸ.ನಂ.121 (ಕ್ಷೇತ್ರ 04 ಎಕರೆ 22 ಗುಂಟೆ) ಜಮೀನನ್ನು ಭೂಸ್ವಾಧಿನ ಪ್ರಕ್ರಿಯೆ ಕೈಗೊಂಡು ಭೂಮಿಯನ್ನು ವಶಪಡಿಸಿಕೊಳ್ಳಲಾಗಿರುತ್ತದೆ. ಭೂಸ್ವಾಧೀನಗೊಂಡ ಕ್ಷೇತ್ರಕ್ಕೆ ಸರಹದ್ದಿನ ಕಲ್ಲುಗಳು ಇರದೇ ಇರುವುದರಿಂದ ಸ್ಥಳೀಯ ಜನರು ಒತ್ತುವರಿ/ಅತಿಕ್ರಮಣ ಮಾಡಿರುವುದು ಕಂಡು ಬಂದಿರುವುದರಿಂದ ಸದರಿ ನಿಗಮದ ಜಮೀನನ್ನು ಸಂರಕ್ಷಿಸಿಕೊಳ್ಳುವುದಗೋಸ್ಕರ ದಿ:21.09.2015ರಂದು ಸಹಾಯಕ ನಿರ್ದೇಶಕರು, ಭೂಮಾಪನ ಇಲಾಖೆ, ಬೈಲಹೊಂಗಲ ಮತ್ತು ಉಪನಿರ್ದೇಶಕರು, ಭೂಮಾಪನ ಇಲಾಖೆ, ಬೆಳಗಾವಿ ಇವರಿಗೆ ಸದರಿ ಜಮೀನಿನ ಸರ್ವೆ ಕಾರ್ಯವನ್ನು ನಿರ್ವಹಿಸಿ ಸರಹದ್ದನ್ನು ಗುರುತಿಸಿಕೊಡುವಂತೆ ಕೋರಲಾಗಿತ್ತು. ದಿ:24.04.2017ರಂದು ಭೂಮಾಪನ ಕಾರ್ಯವನ್ನು ಕೈಗೊಂಡು ಸದರಿ ಜಮೀನಿನ ಸರಹದ್ದನ್ನುಗುರುತಿಸಿದ ಪ್ರಯುಕ್ತ ಸದರಿ ಜಾಗೆಯಲ್ಲಿ ಗುರುತಿನ ಕಲ್ಲನ್ನು ಹಾಕಲಾಗಿರುತ್ತದೆ. ಅತಿಕ್ರಮಣದಾರರು ಸದರಿ ಜಾಗೆಯನ್ನು ತೆರವುಗೊಳಿಸುವಂತೆ ನೋಟೀಸ್‌ನ್ನು ಸಹ ವಿಭಾಗ ಕಛೇರಿಯಿಂದ ಜಾರಿ ಮಾಡಲಾಗಿರುತ್ತದೆ. ಸರಹದ್ದಿನ ಗುಂಟ ತಂತಿ ಬೇಲಿಯನ್ನು ನಿರ್ಮಿಸುವ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ. ಅದರಂತೆ 2017-18ನೇ ಸಾಲಿನಲ್ಲಿ ಸುಮಾರು ಒಂದು ಕಿ.ಮೀ.ನಷ್ಟು ತಂತಿ ಬೇಲಿಯನ್ನು ಸರಹದ್ದಿನ ಗುಂಟಾ ನಿರ್ಮಿಸಲಾಗಿದೆ ಮತ್ತು ಇನ್ನುಳಿದ ಜಾಗೆಗೆ 2018-19ನೇ

ಸಾಲಿನಲ್ಲಿ ನಿಯೋಜಿತ ಕಾರ್ಯಕ್ರಮ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ತಂತಿ ಬೇಲಿಯನ್ನು ಹಾಕಲು ಸಹ ಕ್ರಮವನ್ನು ವಿಭಾಗ ಕಛೇರಿಯವರು ಕೈಗೊಳ್ಳುತ್ತಾರೆ. ತ್ವರಿತಗತಿಯಲ್ಲಿ ನಿಗಮದ ಆಸ್ತಿ ಕಾಪಾಡಿಕೊಳ್ಳುವುದು ಅವಶ್ಯವಿದ್ದ ಪ್ರಯುಕ್ತ ಕ್ರಮಗಳನ್ನು ಕೈಗೊಳ್ಳಲಾಗಿದೆ. ಅತಿಕ್ರಮಣಕಾರರು ತಹಸೀಲ್ದಾರ್, ಗೋಕಾಕ ಇವರಿಗೆ ಅರ್ಜಿ ಸಲ್ಲಿಸಿ ಸಕ್ರಮಗೊಳಿಸುವಂತೆ ಮನವಿಯನ್ನು ಸಹ ಸಲ್ಲಿಸಿರುತ್ತಾರೆ. ಕಂದಾಯ ಇಲಾಖೆ ಹಾಗೂ ನೀರಾವರಿ ಇಲಾಖೆಯ ವತಿಯಿಂದ ವಾಸ್ತವಿಕ ಅಂಶಗಳ ಪತ್ರ–ವ್ಯವಹಾರ ಕೈಗೊಳ್ಳಲಾಗುತ್ತಿದೆ ಎಂದು ನಮೂದಿಸಿರುತ್ತಾರೆ.

ಆಕ್ಷೇಪಣೆಗಳೊಂದಿಗೆ ಒತ್ತುವರಿದಾರರಿಗೆ ನೀಡಿದ ನೋಟೀಸುಗಳ ಪತ್ರಗಳನ್ನು ಸದರಿ ಸರ್ವೆ ನಂಬರುಗಳ ಸರಹದ್ದು ಗುರ್ತಿಸಿ ಅತಿಕ್ರಮಣವಾದ ಜಮೀನಿನ ಹದ್ದಿಗಳನ್ನು ಗುರುತು ಹಾಕಿ ನಕ್ಷೆ ತಯಾರು ಮಾಡಿಕೊಡಲು ಪಿ.ಟಿ.ಶೀಟ್ ಪೂರೈಸಲು ಕೋರಿ ತಹಸೀಲ್ದಾರರಿಗೆ ನೀಡಿಧ ಮನವಿ ಪತ್ರದ ಪ್ರತಿ, ಅತಿಕ್ರಮಣಕಾರರ ವಿರುದ್ಧ ದೂರು ದಾಖಲಿಸಲು ಸಲ್ಲಿಸಿದ ದೂರಿನ ಪ್ರತಿ, ಅತಿಕ್ರಮಣ ಮಾಡಿ ವಾಸವಾಗಿರುವ ಸಾಗುವಳಿ ಮಾಡುತ್ತಿರುವ ಹಾಗೂ ಕ್ರಷರ್ ನಡೆಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಲು ಕೋರಿ ನಿಗಮದ ವಕೀಲರಿಗೆ ಬರೆದ ಪತ್ರದ ಪ್ರತಿಗಳನ್ನು ಸಲ್ಲಿಸಿರುತ್ತಾರೆ.

4. ತನಿಖಾ ಅವಧಿಯಲ್ಲಿ ಕಂಡುಬಂದ ಅಂಶಗಳು:

(1) ಘಟಪ್ರಭಾ ಎಡದಂಡೆ ಕಾಲುವೆ ಹಾಗೂ ದೂಪದಾಳದಲ್ಲಿ ನೀರಾವರಿ ವಸಹಾತು ಹಾಗೂ ಕಛೇರಿಗಳ ನಿರ್ಮಾಣಕ್ಕಾಗಿ ದೂಪದಾಳ ಗ್ರಾಮದ ಸರ್ವೆ ನಂ. 120ರಲ್ಲಿ 82ಎ 12 ಗುಂಟೆ ಜಮೀನು ಹಾಗೂ ಸರ್ವೆ ನಂ. 121ರಲ್ಲಿ 4ಎ 22 ಗುಂಟೆ ಜಮೀನನ್ನು ಪಿ.ಡಬ್ಲ್ಯೂ.ಡಿ., ಘಟಪ್ರಭಾ ಇಲಖೆಯವರು ಭೂಸ್ವಾಧೀನ ಪ್ರಕ್ರಿಯೆ ನಡೆಸಿ ಭೂಮಿಯನ್ನು ವಶಪಡಿಸಿಕೊಂಡಿರುತ್ತಾರೆ.

(2) ಭೂಸ್ವಾಧೀನ ಮಾಡಿಕೊಂಡ ಜಮೀನಿಗೆ ಸರಹದ್ದಿನ ಕಲ್ಲುಗಳು ಹಾಕಿಲ್ಲದಿರುವುದರಿಂದ ಆಕ್ರಮಣಕಾರರು ಒತ್ತುವರಿ/ಅತಿಕ್ರಮಣ ಮಾಡಿರುತ್ತಾರೆಂದು ಎದುರುದಾರರು ಕ್ರಮ ಜರುಗಿಸಿಲ್ಲವೆಂದು ದೂರು ಸಲ್ಲಿಸಿರುತ್ತಾರೆ.

(3) ಸರ್ವೆ ನಂ. 121, 122ರ ಸರ್ಕಾರಿ ಜಮೀನಿನಲ್ಲಿ ಒತ್ತುವರಿದಾರರು ಅಕ್ರಮವಾಗಿ ಕಟ್ಟಡಗಳನ್ನು ಕಟ್ಟಿದ್ದು ಪಂಚಾಯತ್ ಕಾರ್ಯಾಲಯದಲ್ಲಿ ಸದರಿ ಕಟ್ಟಡಗಳಿಗೆ ಸಂಬಂಧಪಟ್ಟಂತೆ ಯಾವುದೇ ಅಧಿಕೃತ ದಾಖಲೆಗಳು ಇರುವುದಿಲ್ಲವೆಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ದಿನಾಂಕ: 11/07/2016ರ ಪತ್ರದಲ್ಲಿ

ತಿಳಿಸಿದ್ದು ಸದರಿ ಜಮೀನುಗಳು ನೀರಾವರಿ ನಿಗಮ ನಿಯಮಿತದ ಸ್ವಾಧೀನದಲ್ಲಿರುವುದು ತನಿಖೆಯಲ್ಲಿ ಕಂಡುಬಂದಿರುತ್ತದೆ.

(4) ಸಹಾಯಕ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಜಿ.ಎಲ್.ಬಿ.ಸಿ., ಉಪ ವಿಭಾಗ ನಂ. 1, ಘಟಪ್ರಭಾ ರವರ ದಿನಾಂಕ: 03/08/2018ರ ಪತ್ರದಲ್ಲಿ ದಿನಾಂಕ: 22/02/2014ರ ನಿಗಮದ ಮುಖ್ಯ ಆಡಳಿತಾಧಿಕಾರಿಗಳು ಹಣಕಾಸು ಸಮಿತಿಯ 13ನೇ ಸಭೆಯಲ್ಲಿ ನಿರ್ಣಯಿಸಿದಂತೆ ನಿಗಮದ ಜಾಗವನ್ನು ಖಾಸಗಿಯವರಿಗೆ ನೀಡಲು ಅವಕಾಶ ಇರುವುದಿಲ್ಲವೆಂದು ನಿರ್ದೇಶನ ನೀಡಿರುವುದಾಗಿ ತಿಳಿಸಿರುತ್ತಾರೆ.

(5) ಸುಮಾರು 29 ಅರ್ಜಿದಾರರು ಅಕ್ರಮವಾಗಿ ಸದರಿ ಜಮೀನುಗಳ ಸ್ವಾಧೀನ ಹೊಂದಿರುವುದಾಗಿ ಅಕ್ರಮ ಸಕ್ರಮ ಮಾಡಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಆಕ್ರಮಣಕಾರರು ಅಕ್ರಮವಾಗಿ ಮನೆಗಳನ್ನು ಕಟ್ಟಿದ್ದು ನೀರಾವರಿ ಕಛೇರಿ ಅಧಿಕಾರಿಗಳು ಕ್ರಮ ಜರುಗಿಸಿರುವುದಿಲ್ಲವೆಂದು ಸದರಿ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದಾರೆಂದು ಆರೋಪಿಸಿರುತ್ತಾರೆ.

(6) ಎದುರುದಾರರ ಕಛೇರಿಯ ಕೋರಿಕೆ ಮೇರೆಗೆ ಭೂಮಾಪನ ಇಲಾಖೆಯವರು ದಿನಾಂಕ: 24/04/2017 ರಂದು ಭೂಮಾಪನ ಕಾರ್ಯವನ್ನು ಕೈಗೊಂಡು ಸರಹದ್ದು ಗುರುತಿಸಿ ಗುರುತಿನ ಕಲ್ಲು ಹಾಕಿರುತ್ತಾರೆ.

(7) ನೀರಾವರಿ ನಿಗಮದ ವಿಭಾಗದ ಕಛೇರಿಯಿಂದ ಅತಿಕ್ರಮಣಗಾರರಿಗೆ ತೆರವುಗೊಳಿಸುವಂತೆ ಸೂಚಿಸಿ ನೋಟೀಸುಗಳನ್ನು ನೀಡಿರುತ್ತಾರೆ.

(8) ಸದರಿ ಜಮೀನಿನ ಸರಹದ್ದಿನಲ್ಲಿ ತಂತಿ ಬೇಲಿಯನ್ನು ನಿರ್ಮಿಸುವ ಕಾರ್ಯ ಕೈಗೊಂಡು 2017-18ನೇ ಸಾಲಿನಲ್ಲಿ 1 ಕಿ.ಮೀ. ನಷ್ಟು ಬೇಲಿ ನಿರ್ಮಿಸಲಾಗಿರುತ್ತದೆ. ಇನ್ನು ಉಳಿದ ಜಾಗದಲ್ಲಿ ಬೇಲಿ ಹಾಕಲು 2018-19ನೇ ಸಾಲಿನಲ್ಲಿ ನಿಯೋಜಿತ ಕಾರ್ಯ ಪಟ್ಟಿಯಲ್ಲಿ ಸೇರ್ಪಡೆಗೊಳಿಸಿ ಸೂಕ್ತ ಕ್ರಮ ಜರುಗಿಸಿರುತ್ತಾರೆ.

(9) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ ರವರು ಸುಮಾರು 40 ಜನ ಅತಿಕ್ರಮಣಕಾರರ ಹೆಸರು ನಮೂದಿಸಿ ಘಟಪ್ರಭಾ ಠಾಣೆಗೆ ದಿನಾಂಕ: 28/07/2017 ರಂದು ದೂರು ನೀಡಿ ಅತಿಕ್ರಮಣಕಾರರ ವಿರುದ್ಧ ಕ್ರಮ ಜರುಗಿಸಲು ಕೋರಿರುತ್ತಾರೆ.

(10) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ನೀರಾವರಿ ನಿಗಮ ನಿಯಮಿತ, ಜಿ.ಎಲ್.ಬಿ.ಸಿ., ಉಪ ವಿಭಾಗ ನಂ. 1 ಘಟಪ್ರಭಾ ರವರು ನಿಯಮಾನುಸಾರ ಅತಿಕ್ರಮಣಕಾರರ ವಿರುದ್ಧ ನೋಟಿಸು ನೀಡಿ, ಕ್ರಿಮಿನಲ್ ಮೊಕದ್ದಮೆ ಹೂಡಿ ತೆರವುಗೊಳಿಸುವ ಪ್ರಕ್ರಿಯೆಗೆ ಕ್ರಮ ಜರುಗಿಸಿರುವುದು ಕಂಡುಬಂದಿದ್ದು ಸರ್ಕಾರದ ಜಮೀನನ್ನು ಪೂರ್ಣವಾಗಿ ಸಂರಕ್ಷಿಸಿರುವುದು ಕಂಡುಬಂದಿರುವುದಿಲ್ಲ.

5. ಆದ್ದುದರಿಂದ, ಮೇಲಿನ ಕಾರಣ ಹಾಗೂ ಕಡತದಲ್ಲಿನ ಆಧಾರಗಳಿಂದ, ಧುಪದಾಳ ಗ್ರಾಮದ ರಿ.ಸರ್ವೆ ನಂ. 120 (82ಎ 12 ಗುಂಟೆ) ಮತ್ತು ರಿ.ಸರ್ವೆ ನಂ. 121(4ಎ 22 ಗುಂಟೆ) ಜಮೀನನ್ನು ರಕ್ಷಿಸಲು ಜಮೀನಿನ ಸುತ್ತ ತಂತಿ ಬೇಲಿ ನಿರ್ಮಿಸುವ ಕಾರ್ಯವನ್ನು ಕ.ನೀ.ನಿ.ನಿ. ಜಿ.ಎಲ್.ಬಿ.ಸಿ., ವಿಭಾಗ ನಂ. 1, ಘಟಪ್ರಭಾ ಇಲಾಖಾ ವತಿಯಿಂದ ಕೈಗೊಂಡಿದ್ದು ಉಳಿದ ಜಮೀನಿನ ಸುತ್ತ ತಂತಿ ಬೇಲಿ ಹಾಕಲು 2018-19ನೇ ಸಾಲಿನಲ್ಲಿ ಕಾರ್ಯಕ್ರಮ ನಿಯೋಜಿಸಿದ್ದು ನಿಯಮಾನುಸಾರ ಒತ್ತುವರಿದಾರರನ್ನು ಪೂರ್ಣವಾಗಿ ತೆರವುಗೊಳಿಸಿ ತಂತಿ ಬೇಲಿ ಹಾಕಿ ಸರ್ಕಾರಿ ಭೂಮಿಯನ್ನು ಸಂರಕ್ಷಿಸಲು ಅಗತ್ಯ ಕ್ರಮ ಜರುಗಿಸಬೇಕಾಗಿ ನಿರ್ದೇಶಿಸಿ ಶಿಸ್ತು ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ ಶಿಫಾರಸ್ಸು ಮಾಡಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ <u>ಒಂದು ತಿಂಗಳೊಳಗಾಗಿ</u> ಈ ಪ್ರಾಧಿಕಾರಕ್ಕೆ ವರದಿ ಮಾಡಲು ಸೂಚಿಸಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 20/10

**[ನ್ಯಾಯಮೂರ್ತಿ ಎನ್. ಆನಂದ]**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**